
# ನೆರಳು




**ಬೆಳಗ್ಗೆ**
ಹಿಂದಕ್ಕೆ ಜಗ್ಗಿದರೂ
ಮುಂದಕ್ಕೆ ಸಾಗಬೇಕೆಂಬ
ದೃಢ ನಡೆ
ದಿಗಂತವ ಸೇರಬೇಕೆಂಬ
ಗುರಿಯೆಡೆಗೆ
ಛಲದ ಓಟದ
ಉತ್ಸಾಹಿ

**ಮಧ್ಯಾಹ್ನ**
ತಣ್ಣಗೆ ಕುಳಿತು
ಕಾಲಬುಡದಲ್ಲಿಯೆ ತೆವಳುತ್ತ
ಏದುಸಿರು ಬಿಡುವ ನಿಗರ್ವಿ
ಮೆಲುನಡೆಯ ಸಂಯಮಿ

**ಸಂಜೆ**
ನಡೆಗೂ ಮುಂದೆ ಸಾಗಲೊಲ್ಲದೆ
ಎಡತಾಕುವ ಬಾರದ
ಹೆಜ್ಜೆಗಳ ಮುಂದಡಿಯಲಿ
ಸಾಷ್ಟಾಂಗದ
ಭಾವ ಮೂಡಿಸುವ ನಿರುತ್ಸಾಹಿ

**• ಮೋಹನ ಕುಂಟಾರ್**